ಘಾಸಿ ಮನಸ್ಸಿಗೆ ಯಾವುದೂ ಇಲ್ಲ, ನಮ್ಮೊಳಗಿನ ಅಪೂರ್ಣತೆಯನ್ನು ನಾವು ಒಪ್ಪಿಕೊಂಡರೆ ನಮ್ಮನ್ನು ನಾವು ರಿಪೇರಿ ಮಾಡಿಕೊಳ್ಳುವುದು ಸುಲಭ ಎಂಬುದನ್ನು ಈ ಆದರ್ಶ ಇಂದಿಗೂ ಎಲ್ಲೆಡೆ ಸಾರುತ್ತಿದೆ.

ಈ ಮರುಜೋಡಣೆಯ ಬಗ್ಗೆ ಮಾತನಾಡುವಾಗ ಜಪಾನಿನ ಮತ್ತೊಂದು ಪುರಾತನ ಅಭ್ಯಾಸವಾದ 'ಕಿಂಟ್ಸುಗಿ'ಯ ಬಗ್ಗೆ ಹೇಳಲೇಬೇಕು. ಒಡೆದುಹೋದ ಮಡಿಕೆ, ಬಟ್ಟಲುಗಳನ್ನು ಚಿನ್ನದ ಅಂಶ ಸೇರಿಸಿ ಮರುಜೋಡಣೆ ಮಾಡುವ ಈ ವಿಶೇಷ ರಿಪೇರಿ ತಂತ್ರ ಈಗ ಅದ್ಭುತ ಕಲೆಯಾಗಿಯೇ ಪ್ರಸಿದ್ಧವಾಗಿದೆ. 'ಕಿಂಟ್ಸುಗಿ' ಕಲೆಯ ಮೂಲದ ಹುಡುಕಾಟ ಹೋಗಿ ನಿಲ್ಲುವುದು ಹದಿನಾಲ್ಕನೇ ಶತಮಾನದ ಜಪಾನೀ

